## ಮಾನ್ಯ ಕರ್ನಾಟಕ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ರವಿಕುಮಾರ್.ಎನ್ ಇವರ ನಿಯಮ 330 ರ ಗಮನ ಸೆಳೆಯುವ ಸೂಚನೆಗೆ ಉತ್ತರ.

**ಸೂಚನೆ:-** ರಾಜ್ಯದಲ್ಲಿ ಭೋವಿ ಸಮುದಾಯದ ಜನರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡದಿರುವುದರಿಂದ ಅವರು ಅನುಭವಿಸುತ್ತಿರುವ ತೊಂದರೆಗಳ ಬಗ್ಗೆ ಪರಿಶೀಲಿಸಲು ರಚಿಸಲಾದ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿಯ ವರದಿಯನ್ವಯ ಎರಡೂ ಜಾತಿಗಳು ಸರ್ಕಾರದ ಆದೇಶದ ಪ್ರಕಾರ ಪರಿಶಿಷ್ಟ ಜಾತಿಗೆ ಸೇರಿರುತ್ತವೆ. ಯಾವುದೆ ಕಾರಣಕ್ಕೂ ಭೋವಿ ಜಾತಿಯವರನ್ನು ವಡ್ಡರ್ ಜಾತಿಗಳ ಸಂಸ್ಕೃತಿಯ ಜೊತೆಯಲ್ಲಿ ಹೋಲಿಕೆ ಮಾಡುವುದು ಸಮಂಜಸವಲ್ಲ, ನ್ಯಾಯ ಸಮ್ಮತವು ಅಲ್ಲ. ಅದು ಏನೇ ಇದ್ದರೂ ಸಂವಿಧಾನದ ಆದೇಶದ ರೀತ್ಯಾ ಭೋವಿ ಹಾಗೂ ಪರ್ಯಾಯ ಪದಗಳೆಂದು ಸೇರಿಸಲ್ಪಟ್ಟ ವಡ್ಡ, ವಡ್ಡರ್, ಕಲ್ಲುವಡ್ಡರ್, ಮಣ್ಣುವಡ್ಡರ್ ಮುಂತಾದವರುಗಳನ್ನು ಪರಿಶಿಷ್ಟ ಜಾತಿ ಗುಂಪಿಗೆ ಸೇರಿಸಲಾಗಿರುತ್ತದೆ. ಸರ್ಕಾರದ ಆದೇಶದ ರೀತ್ಯಾ, ಅಧಿಕಾರಿಗಳು ಇದನ್ನು ವಸ್ತುನಿಷ್ಠವಾಗಿ, ಕಾನೂನಾತ್ಮಕವಾಗಿ ಪರಾಂಭರಿಸದ ಕಾರಣ, ವಿದ್ಯಾರ್ಥಿ/ ವಿದ್ಯಾರ್ಥಿನಿಯರು, ನೌಕರರು ತೊಂದರೆಗೆ ಭೋವಿ ಸಮಾಜದ ಅನೇಕ ಒಳಗಾಗಿದ್ದಾರೆ. ಅಂತಹ ಕಾನೂನಾತ್ಮಕ ಸಮಸ್ಯೆಯನ್ನು ಸದನದಲ್ಲಿ ಪ್ರಸ್ತಾಪಿಸಿದ್ದು, ಸದರಿ ವಿಷಯವನ್ನು ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ ಈ ವರದಿಯನ್ನು ನೀಡಿರುತ್ತದೆ. ಭೋವಿ ಜಾತಿ ಬೇರೆ ಮತ್ತು ಒಡ್ಡರ ಜಾತಿ ಬೇರೆ ಎಂದು ಆದೇಶಗಳಾದಾಗ್ಯೂ ಸಹಿತ ಅಧಿಕಾರಿಗಳು ಗೊಂದಲವನ್ನು ಸೃಷ್ಟಿಸಿ ಭೋವಿ ಎಂದರೆ ಒಡ್ಡರು ಇದ್ದರೆ ಮಾತ್ರ ಜಾತಿ ಪ್ರಮಾಣ ಪತ್ರ ನೀಡುತ್ತೇವೆಂದು ತೊಂದರೆ ನೀಡುತ್ತಿರುವ ಕಾರಣ ತುಂಬಾ ಜಾತಿ ಪ್ರಮಾಣಪತ್ರ ಪಡೆಯಲು ಸಮಸ್ಯೆಯಾಗುತ್ತಿದೆ. ಆದ್ದರಿಂದ ಈ ವಿಷಯದ ಕುರಿತು ನಿಯಮ 330 ರಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುವಂತೆ ಕೋರುತ್ತೇನೆ.

******

**ಉತ್ತರ:-** ಭಾರತ ಸರ್ಕಾರದ THE CONSTITUTION (SCHEDULED CASTES) ORDER 1950 ರಿಂದ 2015 ರವರೆಗೆ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಪಟ್ಟಿಯಲ್ಲಿ **Bhovi** ಜಾತಿಯು ಸೇರ್ಪಡೆಗೊಂಡಿರುವ ಮತ್ತು ತಿದ್ದುಪಡಿಗಳನ್ನು ಈ ಕೆಳಕಂಡಂತೆ ವಿವರಿಸಿದೆ.

ಭಾರತ ಸರ್ಕಾರದ THE CONSTITUTION (SCHEDULED CASTES) ORDER 1950 Dated: 10.08.1950 Parts –XII ರಲ್ಲಿ ಮೈಸೂರು ರಾಜ್ಯದಲ್ಲಿ 6 ಜಾತಿಗಳನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಿದ್ದು ಅದರಲ್ಲಿ ಕ್ರಮ ಸಂ: **4 ರಲ್ಲಿ Bhovi,** ಜಾತಿಯು ನಮೂದಾಗಿರುತ್ತದೆ.

ಮುಂದುವರೆದು, ಭಾರತ ಸರ್ಕಾರದ THE CONSTITUTION (SCHEDULED CASTES) (AMENDMENT) ORDER 1956 Dated: 29.10.1956 Parts –VIII ರ (ಮಾರ್ಪಾಡು) ಆದೇಶದಲ್ಲಿ ಕ್ರಮ ಸಂ:-**5 ರಲ್ಲಿ Bhovi**, ಜಾತಿಯನ್ನು ಕೂರ್ಗ್, ಬೆಳಗಾವಿ, ಬಿಜಾಪುರ, ಧಾರವಾಡ, ದಕ್ಷಿಣ ಕೆನರಾ, ಗುಲ್ಬರ್ಗ, ರಾಯಚೂರು ಮತ್ತು ಬೀದರ್ ಜಿಲ್ಲೆಗಳು ಮತ್ತು ಮೈಸೂರಿನ ಕೊಳ್ಳೇಗಾಲ ತಾಲ್ಲೂಕುಗಳನ್ನು ಹೊರತುಪಡಿಸಿ, ಮೈಸೂರು ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ ಎಂದು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿದೆ.

ಭಾರತ ಸರ್ಕಾರದ THE SCHEDULED CASTES ORDER (AMENDMENT) 1976 Dated: 18.09.1976 Parts –VIII ರ ಆದೇಶದಲ್ಲಿ (ದಿನಾಂಕ: 27-07-1977 ರಿಂದ ಜಾರಿಗೆ ಬಂದಿರುತ್ತದೆ). ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯ ಕ್ರಮ ಸಂ: **23 ರಲ್ಲಿ Bhovi**, ಜಾತಿಯನ್ನು ನಮೂದು ಮಾಡಲಾಗಿರುತ್ತದೆ. ಈ ಆದೇಶದಲ್ಲಿ ಪ್ರದೇಶ ನಿರ್ಬಂಧವನ್ನು ತೆಗೆದು ಹಾಕಲಾಗಿದೆ.

ಭಾರತ ಸರ್ಕಾರದ THE SCHEDULED CASTES ORDER (SECOND AMENDMENT) Act 2002 Dated: 17.12.2002 Parts –VII ರ ಆದೇಶದಲ್ಲಿ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ **Bhovi** ಜಾತಿಯೊಂದಿಗೆ **Od, Odde, Vaddar, Waddar, Voddar, Woddar, (Synonyms)** ಜಾತಿಗಳನ್ನು ಅದರ ಸಮಾನಂತರ ಪದಗಳಾಗಿ ಸೇರಿಸಲಾಗಿರುತ್ತದೆ. (ಕ್ರಮ ಸಂಖ್ಯೆ: **23 Bhovi and synonym castes are Od, Odde, Vaddar, Waddar, Voddar, Woddar)**

ತದನಂತರ, ಭಾರತ ಸರ್ಕಾರದ THE SCHEDULED CASTES (AMENDMENT) Act 2015 Dated:20.03.2015 (AMENDMENT) Parts –VII ರ ಆದೇಶದಲ್ಲಿ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯ ಕ್ರಮ ಸಂಖ್ಯೆ: **23 ರಲ್ಲಿನ Bhovi Od, Odde, Vaddar, Waddar, Voddar, Woddar** ಜಾತಿಗಳೊಂದಿಗೆ Bovi (Non-Besta) Kalluvaddar Mannuvaddar ಗಳನ್ನು ಅದರ ಸಮಾನಂತರ ಪದಗಳಾಗಿ ಸೇರ್ಪಡೆಗೊಳಿಸಿ ಆದೇಶಿಸಿದೆ.(ಪ್ರಸ್ತುತ ಪರಿಶಿಷ್ಟ ಜಾತಿಯ ಕ್ರಮಸಂಖ್ಯೆ: 23 ರಲ್ಲಿ Bhovi Od, Odde, Vaddar, Waddar, Voddar, Woddar, Bovi (Non-Besta) Kalluvaddar.)

ಕರ್ನಾಟಕ ರಾಜ್ಯದ ಭೋವಿ ಜನಾಂಗದವರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ನೀಡುವ ಕುರಿತು ರಚಿಸಲಾದ ವಿಧಾನ ಪರಿಷತ್‌ನ ವಿಶೇಷ ಸದನ ಸಮಿತಿಯ ವರದಿಯಂತೆ ಪರಿಶೀಲಿಸಿ, ಕೆಲವು ವಿವರಗಳೊಂದಿಗೆ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯ ಕ್ರಮಸಂಖ್ಯೆ: 23 ರಲ್ಲಿ ನಮೂದಿಸಿರುವ **"Bhovi, Od, Odde, Vaddar, Wadder, Voddar, Woddar, Bovi (Non-Besta), Kalluvaddar, Mannuvaddar"**, ಜಾತಿಗಳಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರವನ್ನು ಒದಗಿಸುವ ಸಂಬಂಧ ಜಾತಿ ಪ್ರಮಾಣ ಪತ್ರ ನೀಡುವ ಪ್ರಾಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಸಕಇ 113 ಎಸ್‌ಎಡಿ 2015, ದಿನಾಂಕ:-**13.07.2017** ರಲ್ಲಿ ನೀಡಲಾಗಿದೆ. (ಪ್ರತಿ ಲಗತ್ತಿಸಿದೆ.)

ಸದರಿ ಸುತ್ತೋಲೆಯಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ (ನೇಮಕಾತಿಯಲ್ಲಿ ಮೀಸಲಾತಿ ಇತ್ಯಾದಿ.) ಕಾಯ್ದೆ, 1990 ಮತ್ತು 1990, ನಿಯಮಗಳ ಪ್ರಕಾರ ಸ್ಥಳೀಯ ವಿಚಾರಣೆ, ದಾಖಲೆಗಳ ಪರಿಶೀಲನೆ, ಇತ್ಯಾದಿಗಳ ಮೂಲಕ **ಕರ್ನಾಟಕ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆ: 23 ರಲ್ಲಿರುವ ಅರ್ಹ ನೈಜ "ಭೋವಿ" ಜನಾಂಗಕ್ಕೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರಗಳನ್ನು ನೀಡಲು** ಜಾತಿ ಪ್ರಮಾಣ ಪತ್ರ ನೀಡುವ ಪ್ರಾಧಿಕಾರಿಗಳಿಗೆ ಕ್ರಮವಹಿಸುವಂತೆ ಸೂಚಿಸಲಾಗಿದೆ.

(ಡಾ: ಹೆಚ್.ಸಿ. ಮಹಾದೇವಪ್ಪ)
ಸಮಾಜ ಕಲ್ಯಾಣ ಸಚಿವರು